ಇಲಾಖೆ / ವಿಷಯ : DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE: 15/2/2020

# 17ರಿಂದ ಅಧಿವೇಶನ

ವಿಜಯವಾಣಿ ಸುದ್ದಿಜಾಲ, ಬೆಂಗಳೂರು

15ನೇ ವಿಧಾನಸಭೆಯ 6ನೇ ಅಧಿವೇಶನದಲ್ಲಿ 2 ದಿನ ಸಂವಿಧಾನದ ಕುರಿತು ವಿಶೇಷ ಚರ್ಚೆಗೆ ಮೀಸಲಿಡಲಾಗಿದೆ ಎಂದು ವಿಧಾನಸಭೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಫೆ.17ರ ಬೆಳಗ್ಗೆ 11ಕ್ಕೆ ವಿಧಾನ ಮಂಡಲ ಉಭಯ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲಿದ್ದಾರೆ. ಫೆ. 20ವರೆಗೆ ನಡೆಯಲಿರುವ ಅಧಿವೇಶನ ಅನಿರ್ದಿಷ್ಟ ಅವಧಿಗೆ ಮುಂದೂಡಲಾಗುವುದು. ಮಾ.2ರಿಂದ ಮತ್ತೆ ಅಧಿವೇಶನ ಪ್ರಾರಂಭವಾಗಲಿದ್ದು, ಮಾ.31 ತನಕ ಒಟ್ಟು 25 ದಿನ ಅಧಿವೇಶನ ನಡೆಯಲಿದೆ. ಮಾ.5ರಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಜೆಟ್ ಮಂಡನೆ ಮಾಡಲಿದ್ದಾರೆ ಎಂದರು.

» **17ರಂದು ರಾಜ್ಯಪಾಲರ ಭಾಷಣ**

» **ಮಾ.5ಕ್ಕೆ ಬಜೆಟ್ ಮಂಡನೆ**

**6 ವಿಧೇಯಕಗಳು:** ಲೋಕಾಯುಕ್ತ (ತಿದ್ದುಪಡಿ), ನಾವಿನ್ಯತಾ ಪ್ರಾಧಿಕಾರ ವಿಧೇಯಕ, ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, ರಾಜ್ಯಭಾಷಾ (ತಿದ್ದುಪಡಿ) ವಿಧೇಯಕ, ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ, ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ವಿಧೇಯಕ ಸೇರಿ ಪ್ರಸಕ್ತ ಅಧಿವೇಶನದಲ್ಲಿ 6 ವಿಧೇಯಕ ಸ್ವೀಕೃತವಾಗಿದ್ದು, ಸದನದಲ್ಲಿ ಮಂಡಿಸಲು ಕೋರಿಕೆ ಬಂದಲ್ಲಿ ಮಂಡನೆ ಮಾಡಲಾಗುವುದು.



ಚಳಿಗಾಲದ ಅಧಿವೇಶನದಲ್ಲೇ ಸಂವಿಧಾನ ಬಗ್ಗೆ ಚರ್ಚೆ ನಡೆಸಲು ನಿರ್ಧರಿಸಲಾಗಿತ್ತಾದರೂ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸಾಧ್ಯವಾಗಿರಲಿಲ್ಲ. ಆ ಕಾರಣಕ್ಕಾಗಿಯೇ ಮಾ.2 ಮತ್ತು 3 ರಂದು ಸಂವಿಧಾನ ಬಗ್ಗೆ ಚರ್ಚಿಸಲು ಉದ್ದೇಶಿಸಲಾಗಿದೆ ಎಂದರು.

**ಸಂಸತ್ತಿನ ಮಾದರಿ:** ಸಂಸತ್‌ನಲ್ಲಿ ವಿದ್ಯುನ್ಮಾನ ಮಾಧ್ಯಮ ಕ್ಯಾಮರಾಗಳನ್ನು ನಿರ್ಬಂಧಿಸಿರುವ ರೀತಿಯಲ್ಲಿಯೇ ಇಲ್ಲಿಯೂ ನಿರ್ಬಂಧಿಸಲಾಗಿದೆ. ಕಳೆದ ಅಧಿವೇಶನದಲ್ಲಿ ಪ್ರಾಯೋಗಿಕವಾಗಿ ಜಾರಿಯಾಗಿದ್ದ ವ್ಯವಸ್ಥೆ ಈ ಅಧಿವೇಶನದಲ್ಲೂ ಮುಂದುವರಿಯಲಿದೆ ಎಂದು ಸ್ಪೀಕರ್ ಕಾಗೇರಿ ತಿಳಿಸಿದರು. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗೌರವಿಸುತ್ತೇವೆ. ಮಾಧ್ಯಮಕ್ಕೆ ನಿರ್ಬಂಧಗಳನ್ನು ಹಾಕಿಲ್ಲ. ಫೋಟೋ ಕ್ಯಾಮರಾಮನ್‌ಗಳ ಪ್ರವೇಶ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಮಾಡಲಾಗುವುದು ಎಂದರು.